Order the limit is upto Rs. 300. For enhancement of the compensation he should put up the records. In this case, five persons have been paid the compensation at the rate of Rs. 300, and in respect of the remaining 9 persons, their cases cannot be considered since their income is more than Rs. 3,500 each.

SRI PRABHAKAR TELKAR.—My grievance is that every time when these huts belonging to the Harijans and Lambanis, were gutted, they lose everything including their cattle, foodgrains and other things. Also at times they lose their livestocks. My submission to the Government through you Sir, is that the compensation that is being given to such of those people range between Rs 50 and Rs.100. Now the Hon'ble Minister says it is Rs. 300. Will the Tahsildars be empowered to sanction Rs. 500, if even the livestocks were to be perished in fire ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮೊದಲು ಒಂದು ಕುಟುಂಬಕ್ಕೆ ೩೦೦ ರೂಪಾಯಿಗಳು ಎನ್ನುತಕ್ಕ ವಿಷಯ ಇರಲಿಲ್ಲ. ಪ್ರಾಣಿಗಳಿಗೆ ಮತ್ತು ಆಸ್ತಿಗೆ ನಷ್ಟವಾಗುತಕ್ಕ ಸಂದರ್ಭದಲ್ಲಿ ಪರಿಹಾರ ಕೊಡತಕ್ಕದ್ದು ಕಡಿಮೆ ಇತ್ತು. ಜಾಸ್ತಿ ಮಾಡಬೇಕು ಎಂದು ಸಲಹೆ ಬಂದ ಮೇಲೆ ೧೯೭೯ನೇ ಸಾಲಿನಲ್ಲಿ ಏರಿಸಿದ್ದೇವೆ. ಅವರು ರಿಕಾರ್ಡ್ ಬಿಲ್ಟ್‌ಅಪ್ ಮಾಡಿ ಕಳಿಸಿ ಕೊಟ್ಟದ್ದಾರೆ. ಜಾಸ್ತಿ ಕೊಡಬೇಕು, ಎಂಪವರ್ ಮಾಡಬೇಕು ಎನ್ನುವುದು ಒಳ್ಳೆಯ ಸಲಹೆ, ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

Harassing the Labourers of Baldata Mines in Bellary District.

330 SRI PAMPAPATHI (Davanagere).—Will the Chief Minister be pleased to state :-

(a) whether Government is aware that the Police in collaboration with the managerial staff, at Baldata Mines, in Bellary District are filing false cases against the labourers working there and harassing them ;

(b) if so, what action the Government has taken so far ?

SRI R. GUNDU RAO (Chief Minister).—

(a) No

(b) The question does not arise in view of reply to clause (a).

ಶ್ರೀ ಪಂಪಾಪತಿ.—(ಆ) ಪ್ರಶ್ನೆಯಲ್ಲಿ ಬಳ್ಳಾರಿ ಜಿಲ್ಲೆಯ ಬಲ್ಡೋಟಾ ಗಣಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮೇಲೆ ಸತ್ಯಕ್ಕೆ ದೂರವಾದ ಕೇಸುಗಳನ್ನು ಹಾಕಿ ಪೋಲೀಸ್ ಹಾಗೂ ಆಡಳಿತ ವರ್ಗ ಒಂದಾಗಿ ಸತಾಯಿಸುತ್ತಿರುವುದು ಸರಕಾರಕ್ಕೆ ತಿಳಿದಿದೆಯೇ ಎಂದು ಕೇಳಿದರೆ ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ. ಅಧ್ಯಕ್ಷರೇ, ಅಲ್ಲಿ ಅಸಂಘಟಿತ ವರ್ಗದವರು ಇದ್ದರು, ಅವರನ್ನು ಸಂಘಟನೆ ಮಾಡುವುದಕ್ಕೆ ಹೋದಂಥ ವಕೀಲರ ಮೇಲೆ ಅಟೆಂಪ್ಟ್ ಮಾಡಿ ಮರ್ಡರ್ ಕೇಸ್ ಹಾಕಿ, ಅವರು ಈಗಾಗಲೇ ಕೋರ್ಟ್‌ನಲ್ಲಿ ಬಿಡುಗಡೆ ಹೊಂದಿದ್ದಾರೆ. ಉತ್ತರದಲ್ಲಿ 'ಇಲ್ಲ' ಎಂದು ಹೇಳಿದರೆ ಅಲ್ಲಿರತಕ್ಕ ಜನರ ಪರಿಸ್ಥಿತಿ ಏನು. ವಿನಾಕಾರಣ ಕೇಸ್ ಹಾಕಿ ತೊಂದರೆ ಕೊಟ್ಟಿರುವುದರಿಂದ ಅಲ್ಲಿನ ಖಾನ್ ಎಂಬ ಸಬ್ ಇನ್ಸ್‌ಪೆಕ್ಟರ್ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಆರ್. ಗೂಂಡೂರಾವ್.—ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಬಲ್ಲೂಂಟ ಗಣಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಪೋಲೀಸ್ ಹಾಗೂ ಆಡಳಿತ ವರ್ಗ ಒಂದಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೇನೆ. ಮತ್ತು ಸಬ್ ಇನ್ಸ್‌ಪೆಕ್ಟರ್ ಬಹಳ ತೊಂದರೆ ಮಾಡುತ್ತಾ ಇದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದರು. ಸಬ್ ಇನ್ಸ್‌ಪೆಕ್ಟರ್ ಏನಾದರೂ ಆ ರೀತಿ ಸಂಬಂಧಪಟ್ಟ ವಿಷಯದಲ್ಲಿ ಕೈಹಾಕಿದ್ದರೆ, ಅದನ್ನು ಪ್ರತ್ಯೇಕವಾಗಿ ಸರ್ಕಾರಕ್ಕೆ ಕಳಿಸಿಕೊಟ್ಟರೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಇದೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅಳವಿಂದ್, ಮಳೆಬೆನ್ನೂರ್ ಕಾರ್ಮಿಕರನ್ನು ಸೇರಿಸಿ ಕಟ್ಟಳೆ ಹಾಕಿದರು. ಕಟ್ಟಳೆ ವಿಚಾರಣೆ ಆಗಿ ಬಳ್ಳಾರಿ ಸೆಷನ್ ಜಡ್ಜರು ತೀರ್ಪಿನಲ್ಲಿ ಹೇಳಿದ್ದಾರೆ. ಏನೆಂದರೆ, ಪೋಲೀಸ್ ಅಧಿಕಾರಿಗಳು ಸುಳ್ಳು ಕೇಸ್ ಹಾಕಿ, ಸುಳ್ಳು ಸಾಕ್ಷಿಗಳನ್ನು ಕೊಟ್ಟಿದ್ದಾರೆ, ಯಾವುದೇ ವಿಷಯ ಜ್ಞಿರುಜುವಾತಾಗಿಲ್ಲ, ಮಾಲೀಕರು ಮತ್ತು ಪೋಲೀಸರು ಶಾಮೀಲಾಗಿ ಈ ಕಟ್ಟಲೆಯನ್ನು ಹಾಕಿದ್ದಾರೆ ಎಂದು ಅವರು ರಿಮಾರ್ಕ್ಸ್ ಬರೆದಿದ್ದಾರೆ. ದಯವಿಟ್ಟು ಆ ತೀರ್ಪನ್ನು ತರಿಸಿನೋಡಿ ಪೋಲೀಸ್ ಅಧಿಕಾರಿಗಳ ಮೇಲೆ ಅಂತಹ ಅಡ್ವರ್ಸ್ ರಿಮಾರ್ಕ್ ಬರೆದಿದ್ದರೆ, ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಸ್ವಾಮಿ.

ಶ್ರೀ ಆರ್. ಗುಂಡೂರಾವ್.—ಆಗಬಹುದು.

ಶ್ರೀ ಪಂಪಾಪತಿ.—ಈ ಕೇಸಿನಲ್ಲಿ ೩೫ ಜನ ಕೆಲಸ ಮಾಡತಕ್ಕವರು ಸೇರಿರುವುದರಿಂದ ಅವರಿಗೆ ಕೆಲಸವಿಲ್ಲ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮಾಡಿದ ತೊಂದರೆಯಿಂದ ೩೫ ಜನ ಕೆಲಸಗಾರರಿಗೆ ಕೆಲಸವಿಲ್ಲ. ಇದು ಸುಳ್ಳು ಕೇಸ್ ಎಂದು ಕೋರ್ಟಿನಲ್ಲಿ ತೀರ್ಮಾನವಾಗಿದೆ. ಆದುದರಿಂದ ಕೆಲಸ ಗಾರರನ್ನು ಕೆಲಸಕ್ಕೆ ಕಳಿಸುವುದಕ್ಕೆ ಮಾಲೀಕರ ಮೇಲೆ ಒತ್ತಾಯ ತರುತ್ತೀರಾ ಸ್ವಾಮಿ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ನೋಡಬೇಕಾಗುತ್ತದೆ. ಮಾನ್ಯ ಕಕ್ಕಿಲ್ಲಾಯರವರು ಹೇಳಿದ ಹಾಗೆ ಜಡ್ಜ್‌ಮೆಂಡ್ ತರಿಸಿ ಪರಿಶೀಲನೆ ಮಾಡಿ ವಿಚಾರ ಮಾಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWER ON THE DAY
(but not taken up)

Building for Girls High School at Tiptur.

229 SRI V. L. SHIVANNA (Tiptur).—Will the Minister for Education be pleased to state :—

whether the Government Secondary Girls School in Tiptur town has its own building ?

SRI G. B. SHANKARA RAO (Minister for Education).—

This High School is running in its own building.

Chakra Savehaklu and Varahi Project in Thirthahalli Taluk.

601 SRI KADIDAL DIWAKAR (Thirthahalli).—Will the Chief Minister be pleased to state :—

(a) the stage, at which, Chakra, Savehaklu and Varahi irrigation works now going on in Thirthahalli area, stand at present ;